


## ಈಗೊ

ಸೆಲ್ಫಿ ತೆಗೆದುಕೊಂಡು ಫೇಸ್‌ಬುಕ್‌ನಲ್ಲೋ, ಇನ್‌ಸ್ಟಾಗ್ರಾಮಿನಲ್ಲೋ ಹಾಕಿಕೊಂಡು ಖುಷಿಪಡುವುದು ಹಲವರಿಗೆ ಸಮಯ ಕಳೆಯುವ ನೆಚ್ಚಿನ ಹವ್ಯಾಸವಾಗಿಬಿಟ್ಟಿದೆ. ಈ ಸೆಲ್ಫಿಯನ್ನು ಸಾಮಾಜಿಕ ಜಾಲತಾಣಗಳಲ್ಲಿ ಹಾಕಲೆಂದೇ ಈಗೊ ಎಂಬ ಉಚಿತ ಆ್ಯಪ್ ಬಂದಿದೆ. ಆ್ಯಪ್ ಸ್ಟೋರ್‌ನಿಂದ ಡೌನ್‌ಲೋಡ್ ಮಾಡಿಕೊಂಡು ಯೂಸರ್‌ನೇಮ್ ಸೃಷ್ಟಿಸಿಕೊಳ್ಳಬೇಕು. ತನ್ನನ್ನು ತಾನು ಒಂದು ಶಬ್ದದಲ್ಲಿ ಬಣ್ಣಿಸಿಕೊಳ್ಳಬೇಕು. ಈಗೊ ಸೆಲ್ಫಿಗಳನ್ನು ಸಾಮಾಜಿಕ ಜಾಲತಾಣದಲ್ಲಿ ಹಾಕಿ ಫೀಡ್‌ಬ್ಯಾಕ್ ಮೂಲಕ ನಿಮ್ಮ ಆತ್ಮವಿಶ್ವಾಸವನ್ನು ಹೆಚ್ಚಿಸುತ್ತದೆ ಎನ್ನುತ್ತಾರೆ ಇದರ ಸೃಷ್ಟಿಕರ್ತರು. ಜೊತೆಗೆ ನಿಮ್ಮ ಸೆಲ್ಫಿಗಳನ್ನೆಲ್ಲಾ ಸೇರಿಸಿ ಕಥೆ ಪುಸ್ತಕವನ್ನೇ ತಯಾರು ಮಾಡುತ್ತದೆ ಈ ಆ್ಯಪ್.



## ಟಿಂಕರ್‌ಪ್ಲೇ

3ಡಿ ಮುದ್ರಣ ಬಹಳ ಸಂಕೀರ್ಣವಾದ ಕಾರ್ಯ, ಸಾಮಾನ್ಯರು ಇದನ್ನು ಮಾಡಲು ಸಾಧ್ಯವಿಲ್ಲ ಎಂಬ ನಂಬಿಕೆ ಇತ್ತು. ಆದರೆ ಮಕ್ಕಳು ಕೂಡಾ ಈಗ ತಮಗೆ ಇಷ್ಟವಾದ ಕಾರ್ಟೂನ್ ಚಿತ್ರಗಳನ್ನು 3ಡಿಯಲ್ಲಿ ಪ್ರಿಂಟ್ ಮಾಡಿಕೊಳ್ಳಬಹುದು. ಇದಕ್ಕಾಗಿ ಆಟೋಕ್ಯಾಡ್ ಡಿಸೈನ್ ಮಾಡಿರುವ ಕಂಪೆನಿ ಆಟೋಡೆಸ್ಕ್ 'ಟಿಂಕರ್‌ಪ್ಲೇ' ಎಂಬ ಆ್ಯಪ್ ತಂದಿದೆ. ಇದರಲ್ಲಿ ಲೈಬ್ರರಿಯಿದ್ದು, ಮಕ್ಕಳು ತಮಗೆ ಬೇಕಾದ ಕಾರ್ಟೂನಿನ ವಿವಿಧ ಭಾಗಗಳನ್ನು ಎಳೆದುಕೊಳ್ಳಬಹುದು. ನಂತರ ಈ ಭಾಗಗಳನ್ನು ಟೆಂಪ್ಲೇಟ್‌ನಲ್ಲಿ ಜೋಡಿಸಬಹುದು. ಇದು ತಕ್ಷಣಕ್ಕೆ ಸೇವ್ ಆಗಿ ನಂತರ ಪ್ರಿಂಟ್ ಆಗುತ್ತದೆ. ಈ ಆ್ಯಪ್ ಅನ್ನು ಐಫೋನ್, ವಿಂಡೋಸ್, ಆ್ಯಂಡ್ರಾಯ್ಡ್ ಫೋನಿಗೆ ಡೌನ್‌ಲೋಡ್ ಮಾಡಬಹುದು.

## ಯಾಪ್‌ಆ್ಯಪ್

ಉದ್ಯಮಿಗಳು ಎಚ್‌ಡಿ, ವಿಡಿಯೋ ಸಂವಹನಕ್ಕಾಗಿ ಡಿಜ್ಜಿ ಗ್ಲೋಬೈಲ್ ತಂದಿರುವ ಯಾಪ್‌ಆ್ಯಪ್ ಎಂಬ ಆ್ಯಪ್ ಅನ್ನು ಬಳಸುತ್ತಿದ್ದಾರೆ. ಇದನ್ನು ಆ್ಯಪ್ ಸ್ಟೋರ್‌ನಿಂದ ಆ್ಯಂಡ್ರಾಯ್ಡ್ ಅಥವಾ ಐಒಎಸ್ ಸ್ಮಾರ್ಟ್‌ಫೋನ್‌ಗೆ ಡೌನ್‌ಲೋಡ್ ಮಾಡಬಹುದು. ನಂತರ ಖಾಸಗಿ ಪೇಜ್ ಸೃಷ್ಟಿಸಿಕೊಂಡು ವರ್ಚುವಲ್ ಸಂಭಾಷಣೆ ನಡೆಸಬಹುದು ಅಥವಾ ಇನ್ನೊಬ್ಬ ಯಾಪ್‌ಆ್ಯಪ್ ಬಳಕೆದಾರನ ಜೊತೆ ಒನ್–ಆನ್–ಒನ್ ಕರೆ ಮಾಡಬಹುದು. ಒಂದೇ ಬಾರಿ ಐವರ ಜೊತೆ ಸಂಭಾಷಣೆ ನಡೆಸಬಹುದು. ಮಧ್ಯೆ ಸ್ಮಾರ್ಟ್‌ಫೋನ್‌ನ ಇತರ ಚಟುವಟಿಕೆ ನಡೆಸಿದರೂ ಕರೆ ಕಡಿತಗೊಳ್ಳುವುದಿಲ್ಲ.




## ಪ್ಲೇಸ್‌ಪಿಕ್

ಯಾವುದೇ ಪ್ರವಾಸಿ ತಾಣಕ್ಕೆ ಭೇಟಿ ನೀಡಿದಾಗ ಅಲ್ಲಿಯ ಪ್ರಮುಖ ಸ್ಥಳಗಳಿಗೆ ಭೇಟಿ ನೀಡಿ ಫೋಟೊ ತೆಗೆದುಕೊಳ್ಳುವುದು ಸಾಮಾನ್ಯ. ಅದರ ಬದಲು ನಿಮಗೆ ಮಾತ್ರ ಕಂಡ ವಿಶೇಷಗಳನ್ನು ಚಿತ್ರೀಕರಿಸಿಕೊಂಡು ಹಾಕಲು ಅಥವಾ ವಿಶೇಷ ಚಿತ್ರಗಳನ್ನು ನೋಡಲು ಪ್ಲೇಸ್‌ಪಿಕ್ ಎಂಬ ವೆಬ್‌ಸೈಟ್ ಹಾಗೂ ಆ್ಯಪ್ ಬಂದಿದೆ. ಆ್ಯಂಡ್ರಾಯ್ಡ್ ಮತ್ತು ಐಒಎಸ್‌ನ ಈ ಆ್ಯಪ್‌ನಲ್ಲಿ ನಿಮ್ಮದೇ ಕಾಪಿರೈಟ್ ಇರುವ ಚಿತ್ರಗಳನ್ನು ಪೇಸ್ಟ್ ಮಾಡಬಹುದು. ಇದು ಆ ಸ್ಥಳಕ್ಕೆ ಲಿಂಕ್ ಕೊಡುತ್ತದೆ. ಐದು ಭಾಷೆಗಳಲ್ಲಿರುವ ಈ ಆ್ಯಪ್‌ನಲ್ಲಿ 21 ವಿಭಾಗಗಳಿದ್ದು ನಕ್ಷೆ ಕೂಡಾ ಲಭ್ಯ. ನೀವು ಆ ಜಾಗದ ಸಮೀಪಕ್ಕೆ ಪ್ರವಾಸ ಹೋದರೆ ಅದನ್ನು ನಕ್ಷೆಯಲ್ಲಿ ಗುರುತಿಸಿ ನೋಡಿಕೊಂಡು ಬರಬಹುದು.



■ ಎಸ್. ತುಂಬೆ